# ಉದಯವಾಣಿ

ಜನಮನದ ಜೀವನಾಡಿ

www.udayavani.com | Hubballi ಹುಬ್ಬಳ್ಳಿ | ಶನಿವಾರ, ಫೆಬ್ರವರಿ 29, 2020 | ಪುಟ 14+4 | ₹ 5.00 ಮಣಿಪಾಲ | ಬೆಂಗಳೂರು | ಹುಬ್ಬಳ್ಳಿ | ಕಲ


ಹಗ್ಗವನ್ನು ಸಾಂಕೇತಿಕವಾಗಿ ಎಳೆದು ಮುಂತಾದವರು ಉಪಸ್ಥಿತರಿದ್ದರು. ಎನ್ನುವಂತೆ ನಿರ್ಮಿಸಬೇಕು ಎಂಬ ಕನಸಿದೆ ಎಂದರು. ಎದುರಿಸಲು ಛಾತಿ ಬೇಕು ಎಂದರು. ಭಾಗವ

ಮಹಿಳಾ ಸಮಾವೇಶ ■ ಶಿಸ್ತು-ಸಂಸ್ಕಾರವನ್ನು ಹೆಣ್ಣು ಮಾತ್ರ ನೀಡಬಲ್ಲಳು: ಹೆಬ್ಬಾರ್

## ಸ್ತ್ರೀ ಶಕ್ತಿ ಬಲಾಢ್ಯವಾದರೆ ಸಮಾಜದ ಪ್ರಗತಿ ಸಾಧ್ಯ

**ಮುಂಡಗೋಡ:** ಹೆಣ್ಣು ಮಕ್ಕಳ ಅಭಿವೃದ್ಧಿಗಾಗಿ ಹೂಡಿದ ಹಣ ಎಂದಿಗೂ ವ್ಯರ್ಥವಾಗದು. ಸ್ತ್ರೀ ಶಕ್ತಿ ಬಲಾಢ್ಯವಾದರೆ ಮಾತ್ರ ಸಮಾಜದ ಪ್ರಗತಿ ಸಾಧ್ಯ ಎಂದು ಕಾರ್ಮಿಕ ಹಾಗೂ ಸಕ್ಕರೆ ಸಚಿವ ಶಿವರಾಮ ಹೆಬ್ಬಾರ್ ಹೇಳಿದರು.

ಪಟ್ಟಣದ ಲೊಯೋಲಾ ವಿಕಾಸ ಕೇಂದ್ರ ಸಭಾಂಗಣದಲ್ಲಿ ಮನು ವಿಕಾಸ ಸಂಸ್ಥೆಯವರು ಆಯೋಜಿಸಿದ ಮಹಿಳಾ ಸಮಾವೇಶವನ್ನು ಉದ್ಘಾಟಿಸಿ ಮಾತನಾಡಿದ ಅವರು, ಹೆಣ್ಣು ಮಕ್ಕಳು ವಿದ್ಯಾವಂತರಾದರೆ ಕುಟುಂಬ ಮಾತ್ರವಲ್ಲದೇ ಸಮಾಜಕ್ಕೂ ಮಾದರಿಯಾಗಬಹುದು. 21ನೇ ಶತಮಾನದಲ್ಲಿ ಸ್ತ್ರೀ. ಶಕ್ತಿ ಸಂಘಟನೆಗಳಿಂದ ಮಹಿಳಾ ಕ್ರಾಂತಿಯಾಗುತ್ತಿದೆ. ಹೆಣ್ಣು ಮಕ್ಕಳಿಗೆ ನೀಡಿದ ಸಾಲ ಶೇ.99ರಷ್ಟು ಮರು ಪಾವತಿಯಾಗುತ್ತದೆ. ಏಕೆಂದರೆ ಹೆಣ್ಣು ಮಕ್ಕಳು ಪಡೆದ ಸಾಲದ ಹಣವನ್ನು ಸದುಪಯೋಗ ಪಡಿಸಿಕೊಂಡು ಸಬಲತೆ ಸಾಧಿಸುತ್ತಾರಲ್ಲದೆ ಗೌರವಕ್ಕೆ ಹೆದರಿ ಜೀವನ ಸಾಗಿಸುವ ಮನೋಭಾವನೆ ಹೊಂದಿರುತ್ತಾರೆ. ಶಿಸ್ತು, ಸಂಸ್ಕಾರವನ್ನು ಹೆಣ್ಣಿನಿಂದ ಮಾತ್ರ ನೀಡಲು ಸಾಧ್ಯ ಎಂದ ಅವರು, ಸ್ತ್ರೀ ಶಕ್ತಿ ಸಂಘಗಳಿಗೆ ಬ್ಯಾಂಕ್‌ನವರು ಸಾಲ ನೀಡಲು ಹಿಂದೇಟು ಹಾಕುತ್ತಿರುವ ಬಗ್ಗೆ ದೂರುಗಳು ಕೇಳಿ ಬರುತ್ತಿವೆ. ಈ ಬಗ್ಗೆ ಲೀಡ್ ಬ್ಯಾಂಕ್‌ನವರೊಂದಿಗೆ ಚರ್ಚಿಸಿ ಸಮಸ್ಯೆ ಪರಿಹರಿಸುವುದಾಗಿ ಭರವಸೆ ನೀಡಿದರು.



**ಮುಂಡಗೋಡ: ಮನು ವಿಕಾಸ ಸಂಸ್ಥೆಯವರು ಆಯೋಜಿಸಿದ್ದ ಮಹಿಳಾ ಸಮಾವೇಶದಲ್ಲಿ ಭಾಗವಹಿಸಿದ್ದ ಮಹಿಳೆಯರು.**

ನಂತರ ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಅಧ್ಯಕ್ಷ ವಿ.ಎಸ್ ಪಾಟೀಲ ಮಾತನಾಡಿ, 12ನೇ ಶತಮಾನದಲ್ಲಿ ಮಹಿಳೆಯರ ಸಮಾವೇಶ ಮಾಡುವುದು ಅವಶ್ಯವಿತ್ತು. ಈಗ ಅಂತಹ ಪ್ರಸಂಗವಿಲ್ಲ, ಎಲ್ಲ ರಂಗದಲ್ಲೂ ಕೂಡ ಮಹಿಳೆಯರು ಮುಂದುವರೆದಿದ್ದಾರೆ. ಸರ್ಕಾರಗಳು ಕೂಡ ಮಹಿಳೆಯರ ಮೇಲೆ ಹೆಚ್ಚಿನ ವಿಶ್ವಾಸವನ್ನಿಟ್ಟು ಆಶ್ರಯ ಮನೆ ಹಾಗೂ ಗ್ಯಾಸ್ ಸೇರಿದಂತೆ ಹಲವಾರು ಯೋಜನೆಗಳನ್ನು ನೀಡುತ್ತಿವೆ ಎಂದರು.

ಮನುವಿಕಾಸ ಸಂಸ್ಥೆ ಮುಖ್ಯಸ್ಥ ಗಣಪತಿ ಭಟ್ ಪ್ರಾಸ್ತಾವಿಕ ಮಾತನಾಡಿ ಸ್ವಾಗತಿಸಿ ನಿರೂಪಿಸಿದರು. ಜಿ.ಪಂ ಸದಸ್ಯ ರವಿಗೌಡ ಪಾಟೀಲ, ತಾಪಂ ಉಪಾಧ್ಯಕ್ಷ ಕೃಷ್ಣಮೂರ್ತಿ ನಾಡಿಗ್, ತಾ.ಪಂ ಇಒ ಪ್ರವೀಣ ಕಟ್ಟಿ, ಉಮೇಶ ಬಿಜಾಪುರ, ಬಸಯ್ಯ ನಡುವಿನಮನಿ, ಕೆಂಜೋಡಿ ಗಲಬಿ, ಗುಡ್ಡಪ್ಪ ಕಾತೂರ ಮುಂತಾದವರು ಉಪಸ್ಥಿತರಿದ್ದರು.